doc-571
T-P-2

Reg No B G 155 ಶ್ರೀ 26 — 10 —72

In The State **First Golden Jubilee Celebrated Paper 'Satyavadi' daily, Mysore 4**



ಮೈಸೂರು ದಸರಾ ವಸ್ತುಪ್ರದರ್ಶನ
ಮತ್ತು
ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 27-10-1972 ಶುಕ್ರವಾರ

ಕಲಾಕ್ಷೇತ್ರ

6 ರಿಂದ 7 ಸಂಜೆ — ಶ್ರೀವಾರ್ ಎಸ್. ನಾಗರಾಜು, ಮೈಸೂರು — ಪಿಟೀಲು
7 ರಿಂದ 9-30 ರಾತ್ರಿ — ಮೈಸೂರು ನ್ಯಾಷನಲ್ಸ್ ಕಲಾಮಂಡಲಿ, ಮೈಸೂರು — ನಾಟಕ "ರಾಷ್ಟ್ರವೀರ"

ಜೀವನರಾಯನಕಟ್ಟೆ

7 ರಿಂದ 8 ರಾತ್ರಿ — ಗಮಕ ವಿದ್ವಾನ್ ಶ್ರೀ ವೆಂಕಟಸುಬ್ಬಯ್ಯ ಮತ್ತು ಶ್ರೀಮತಿ ಗೌರಮ್ಮ ನಾಗರಾಜ್, ಮೈಸೂರು — ಗಮಕ
8 ರಿಂದ 9-30 ರಾತ್ರಿ — ಬೇಬಿ ಶಾಲಿನಿ, ಬೆಂಗಳೂರು-10 — ನೃತ್ಯ

ವುಡ್‌ಲಾಂಡ್ಸ್ 27-10-72 ರಿಂದ ಅಮೋಘ 5ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ
ಹಿಂದಿ ಕಲರ್ ಅತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ — ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ 10-30 ಕ್ಕೆ ಮೇಯರ್ ಮುತ್ತಣ್ಣ

ಅಪೂರ್ವ ಬಾಂಧವ್ಯ 2 ನೇ ವಾರ

ಪಾತ್ರ — ಅಶ್ವಥ್, ಗಂಗಾಧರ್, ರಾಜೇಶ್, ಬಿ. ವಿ. ರಾಧ, ಪಂಡರೀಬಾಯಿ, ಸಂಧ್ಯಾರಾಣಿ, ಜಯಶ್ರೀ, ರಮಾದೇವಿ ದಿನ 3 ಪ್ರದರ್ಶನಗಳು

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore

ತನಿಖೆ ಕ್ರಮ

ಬೆಂಗಳೂರು— ಸ್ಪೋರ್ಟ್ಸ್ ಪರ್ಚೇಸ್ ಇಲಾಖೆಯ ಕೆಲಸಕಾರ್ಯಗಳ ಬಗ್ಗೆ ತನಿಖೆ ನಡೆಸಲು ಮಂತ್ರಿಮಂಡಲ ಒಂದು ಉಪಸಮಿತಿ ನೇಮಿಸಿದೆಯೆಂದು ಗೊತ್ತಾಗಿದೆ.

★

ಭತ್ತದ ಒಟ್ಟಾರೆ ವ್ಯಾಪಾರ

ಬೆಂಗಳೂರು— ಭತ್ತದ ಒಟ್ಟಾರೆ ವ್ಯಾಪಾರವನ್ನು ವಹಿಸಿಕೊಂಡು, ಪಟ್ಟಣಗಳಲ್ಲಿ ಶೇಕಡ 80, ಗ್ರಾಮಾಂತರಗಳಲ್ಲಿ ಶೇಕಡ 20 ಜನಸಂಖ್ಯೆಗೆ ಅನ್ನೋಪಚ್ಚಾರಿಕ ರೇಷನ್ ಜಾರಿ ತರುವ ವಿಷಯವನ್ನು ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್‌ರವರು ತಿಳಿಸಿರುವರು.

●

ಆಸ್ತಿ ಪರಿಮಿತಿ

ನವದೆಹಲಿ — ಪಟ್ಟಣಗಳಲ್ಲಿ ರೂ. 5 ಲಕ್ಷ ಆಸ್ತಿ ಪರಿಮಿತಿಯ ಮಸೂದೆಯನ್ನು ಮುಂದಿನ ಪಾರ್ಲಿಮೆಂಟಿನಲ್ಲಿ ತರುವ ನಿರೀಕ್ಷೆ ಇದೆ.

●

ಶ್ರೀ ಗಣೇಶ ವನ್ಯಜೀವಿಯೆ !

ಕಾರವಾರ— ಇಲ್ಲಿ ಏರ್ಪಟ್ಟಿದ್ದ ವನ್ಯ ಜೀವಿಗಳ ಪ್ರದರ್ಶನದಲ್ಲಿ ಒಂದು ಮರದ ಗಣೇಶ ವಿಗ್ರಹವಿಟ್ಟಿದ್ದಕ್ಕೆ ಸಾರ್ವಜನರು ಪ್ರತಿಭಟಿಸಲು ಅದನ್ನು ತೆಗೆಯಲಾಯಿತು. ಸ್ಥಳೀಯ ನಾಯಕರು ಸರಕಾರಕ್ಕೆ ಪ್ರತಿಭಟನೆ ಸಲ್ಲಿಸಲು ಯೋಚಿಸಿರುವರು.

●

ನರಬಲಿ ಸಂಬಂಧದಲ್ಲಿ ಡಸ್ತಗಿರಿಗಳು

ನಾಗಪುರ— ವರ್ಧಗಾಮ್‌ನಲ್ಲಿ ಆಗಸ್ಟ್ 12 ರಂದು ಬೌದ್ಧ ರಾಮದಾಸ್ ಎಂಬುವನ ನರಬಲಿ ಸಂಬಂಧವಾಗಿ 42 ಮಂದಿಯನ್ನು ದಸ್ತಗಿರಿ ಮಾಡಲಾಗಿದೆ — ಇದರಲ್ಲಿ 3 ಮಂದಿ ಪಂಚಾಯಿತ್ ಸದಸ್ಯರು, ಒಬ್ಬ ಉಪಾಧ್ಯಾಯ, ಒಬ್ಬ ಪೋಲೀಸು ಅಧಿಕಾರಿ, ಒಬ್ಬ ಸರ್ಕಾರಿ ಡಾಕ್ಟರ್ ಇರುವರು.

○

ಡಾಕ್ಟರುಗಳಿಗೆ ಕೆಲಸ

ಬೆಳಗಾಂ— ರಾಜ್ಯದಲ್ಲಿ 500 ಡಾಕ್ಟರುಗಳೂ, 1000 ವೈದ್ಯಕೀಯ ನೌಕರ ಪೂನೇರೂ ನೇಮಿಸಲ್ಪಡುವರೆಂದು ಆರೋಗ್ಯ ಮಂತ್ರಿ ಶ್ರೀ ಸಿದ್ಧವೀರಪ್ಪನವರು ಜಿಲ್ಲಾ ಕ್ಷಯರೋಗ ಕೇಂದ್ರವನ್ನು ಉದ್ಘಾಟಿಸುತ್ತಾ ಹೇಳಿದರು

ರೇಷ್ಮೆ ಕೈಗಾರಿಕೆ

ಮೈಸೂರು— ರೇಷ್ಮೆ ವ್ಯವಸಾಯದ ಉತ್ತಮತೆಗೆ ಈ ಸಂಬಂಧದ ಸಂಸ್ಥೆ ಮತ್ತು ಸರಕಾರ ಜಂಟಿಯಾಗಿ ಕೆಲಸ ಮಾಡಬೇಕೆಂದು ಈ ಸಂಬಂಧದ ಸೆಮಿನಾರಿನ ಅಧ್ಯಕ್ಷತೆ ವಹಿಸಿದ್ದ ಶ್ರೀ ಇಂದರ್ ಮಾಲ ಹೋತ್ರೆ ಎಂ. ಪಿ. ಹೇಳಿದರು.

○

65 ದೇಶಗಳ ಸಹಾಯ

ವಿಶ್ವಸಂಸ್ಥೆ— ಅಭಿವೃದ್ಧಿಗೊಳ್ಳುತ್ತಿರುವ ದೇಶಗಳಲ್ಲಿನ ಕೈಗಾರಿಕೆಗಳಿಗಾಗಿ 65 ದೇಶಗಳು ರೂ. 2 25 ಮಿಲಿಯ ಡಾಲರುಗಳನ್ನು ಉದಾರ ದಾನಮಾಡಿವೆ.

○

ಉಪಗ್ರಹ ಸ್ಪೇಸ್ ಮಾರಾಟ

ನ್ಯೂಯಾರ್ಕ್— ಚೀಣಾಕ್ಕೆ ಒಂದು ಉಪಗ್ರಹ ಸ್ಪೇನ್ನನ್ನು ಮಾರಲುವುದಾಗಿ ವೆಸ್ಟಿಂಗ್ ಯೂನಿರ್ಯ ನ್ಯಾಷನಲ್ ಸಂಸ್ಥೆ ಪ್ರಕಟಿಸಿದೆ.

○

ಮಹಿಳೆಯರಲ್ಲಿ ವಿನಂತಿ

ಬೆಂಗಳೂರು — ಕಾಳಸಂತೆಕೋರರು ಮತ್ತು ನಿತ್ಯೋಪಯೋಗ ಪದಾರ್ಥಗಳಿಗೆ ಬೆರಿಕೆ ಮಾಡುವವರನ್ನೂ ಹೊರಪಡಿಸಲು ಮಹಿಳೆಯರು ಸಹಾಯ ಮಾಡಬೇಕೆಂದು ಆಹಾರ ಸಚಿವೆ ಶ್ರೀಮತಿ ಈವಾ ವಾಜ್ ರಾಜ್ಯದ ಮಹಿಳೆಯರಲ್ಲಿ ವಿನಂತಿಸಿರುವರು — ಪ್ರತಿ ಜಿಲ್ಲೆ ಮತ್ತು ಬೆಂಗಳೂರು ನಗರದಲ್ಲಿ ಆಹಾರ ಸಮಿತಿ ಸ್ಥಾಪಿಸಲಾಗುವುದೆಂದೂ ಹೇಳಿದರು.

○

ಬಸ್ ಸ್ಟ್ಯಾಂಡು ವರ್ಗಾವಣೆ

ಮೈಸೂರು— ಗಾಂಧಿ ಸ್ಕ್ವೇರಿನಲ್ಲಿರುವ ಬಸ್ ಸ್ಟ್ಯಾಂಡನ್ನು ಸಯ್ಯಾಜಿ ರಾವ್ ರೋಡಿನಲ್ಲಿರುವ ಹಳೇ ಬಸ್ ಸ್ಟ್ಯಾಂಡಿಗೆ ವರ್ಗಾಯಿಸುವ ಯೋಜನೆಗೆ ಪೌರಸಭೆಯ ಸ್ಟ್ಯಾಂಡಿಂಗ್ ಕಮಿಟಿ ಒಪ್ಪಿದೆ.

○

ಶಾಸನಸಭೆ

ಬೆಂಗಳೂರು— ಶಾಸನಸಭೆಯು ನವೆಂಬರು 20 ರ ನಂತರ ನಡೆಯುವ ಸಂಭವವಿದೆಯೆಂದು ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್‌ರವರು ಪತ್ರಿಕೆಯವರಿಗೆ ತಿಳಿಸಿದರು.

★

ಭಾರತ ಸೇರಿ 10 ದೇಶಗಳು ವಿಶ್ವಸಂಸ್ಥೆಗೆ ನಿವೇಶನ ಕೊಡಲಿವೆ.

ಪ್ರ ಕ ಟ ಣೆ

ನಂ. ಎಸ್‌ಟಿಎಸ್. 219/72

ವಿಷಯ : ಅನುಪಯುಕ್ತ ಪೋಲೀಸ್ ವಾಹನಗಳ ಹರಾಜು

ರೆಫರೆನ್ಸ್ : ಸರ್ಕಾರದ ಆಜ್ಞೆ ನಂ. ಹೆಚ್‌ಡಿ 56 ಪಿಎಂವಿ 72 ತಾ. 30-8-72

2. ಪ್ರಧಾನ ಕಚೇರಿ ಮೆಮೋ ನಂ. ಎಸ್ ಟಿ ಎಸ್ II. !. 133/71 ತಾ. 15-9-72

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಕಂಡ ಪೋಲೀಸ್ ಮೋಟಾರ್ ವಾಹನಗಳು ಮೈಸೂರಿನ ಜ್ಯೋತಿ ನಗರದಲ್ಲಿರುವ ಡಿಸ್ಟ್ರಿಕ್ಟ್ ಆರ್ಮ್ಡ್ ರಿಸರ್ವ್ ಹೆಡ್ ಕ್ವಾರ್ಟರ್ಸ್ ಪ್ರದೇಶದಲ್ಲಿ ಬಹಿರಂಗ ಹರಾಜಿನಲ್ಲಿ 27-11-72 ನೇ ಸೋಮವಾರ ಬೆಳಗ್ಗೆ 11 ಗಂಟೆಗೆ ಮಾರಾಟ ಮಾಡಲ್ಪಡುವುದು.

ಸೀ ನಂ	ಯೂನಿಟ್ ಹೆಸರು	ವಾಹನದ ರಿಜಿಸ್ಟ್ರೇಷನ್ ನಂಬರು	ವಾಹನದ ವರ್ಗ	ವಾಹನದ ತಯಾರಿಕೆ ಮತ್ತು ಮಾದರಿ	ತಯಾರಿಕೆ ವರ್ಷ	ಮೂಲದ ಬೆಲೆ
1	ಎಸ್. ಬಿ. ಮೈಸೂರು	ಎಂವೈಎಂ – 170 ಎಂಜಿನ್ ನಂ. 604383 ಚಾಸಿಸ್. ನಂ 68670	ಜೀಪ್	ಸಿಜೆ 3 ಬಿ. ಯೂನಿವರ್ಸಲ್ ಜೀಪ್	1961	14,300 . 93
2	ಡಿಟೋ	ಎಂವೈಎಂ – 171 ಎಂಜಿನ್ ನಂ. 602508 ಚಾಸಿಸ್ ನಂ. 65155	ಜೀಪ್	ಡಿಟೋ	1960	14190 . 37
3	ಡಿಟೋ	ಎಂವೈಎಂ – 4066 ಎಂಜಿನ್ ನಂ. ಟಿಎಸ್ 544 3072 ಚಾಸಿಸ್ ನಂ. ಪಿಎಚ್ 500799	ವ್ಯಾನ್ ಮುಚ್ಚಿದ ಮಾದರಿ	ಕಾರ್ಗೊ	1959	24302 . 12
4	ಪ್ರಿನ್ಸಿಪಾಲ್, ಪಿ ಟಿ ಸಿ ಮೈಸೂರು	ಎಂವೈಎಂ – 4703 ಎಂಜಿನ್ ನಂ. ಟಿಎಕ್ಸ್-342 –ಪಿಎ 5466 ಚಾಸಿಸ್ ನಂ. 801113458	ವ್ಯಾನ್	ಫಾರ್ಗೊ ವ್ಯಾನ್	1956	18058 . 00

1 ಅಪೇಕ್ಷಿತ ಬಿಡ್‌ದಾರರು ಮೈಸೂರಿನ ಪಿ ಎಂ ಟಿ, ಡಿ ಎ ಆರ್ ಹೆಡ್ ಕ್ವಾರ್ಟರ್ಸ್‌ನ ಪ್ರದೇಶದಲ್ಲಿ ಕೆಲಸದ ಯಾವುದೇ ದಿನದಲ್ಲಿ ಬೆಳಿಗ್ಗೆ 9 ರಿಂದ 11 ರ ವರೆಗೆ ಮತ್ತು ಸಂಜೆ 4 ರಿಂದ 5 ರ ವರೆಗೆ ವಾಹನಗಳನ್ನು ಪರೀಕ್ಷಿಸಬಹುದು.

2 ಬಿಡ್ ಮಾಡಲು ಅಪೇಕ್ಷೆಯುಳ್ಳವರು ಮೈಸೂರಿನಲ್ಲಿರುವ ಸೂಪರಿಂಟೆಂಡೆಂಟ್ ಆಫ್ ಪೋಲೀಸ್‌ರೊಡನೆ ಪ್ರತಿ ಬಿಡ್‌ದಾರರು ರೂ 200/– ನ್ನು ಠೇವಣಿಯನ್ನಾಗಿ ಇಡಬೇಕು.

3 ಹರಾಜು ಮುಗಿದೊಡನೆ ಯಶಸ್ವಿ ಆದ ಬಿಡ್‌ದಾರರು ಬಿಡ್ ಹಣದ ಶೇಕಡ 50 ರಷ್ಟನ್ನು ಪಾವತಿ ಮಾಡಬೇಕು. ಹಾಗೆ ಮಾಡದಿದ್ದರೆ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ವಾಹನವನ್ನು ಮರು ಮಾರಾಟ ಮಾಡಲಾಗುವುದು ಮತ್ತು ಅನಂತರದ ಮಾರಾಟದ ವರಮಾನಕ್ಕೆ ಹಿಂದಿನ ಬಿಡ್‌ದಾರರು ಯಾವುದೇ ವಿಧವಾದ ಹಕ್ಕನ್ನು ಹೊಂದಿರುವುದಿಲ್ಲ ಮರುಮಾರಾಟದಲ್ಲಿ ಯಾವುದೇ ನಷ್ಟವಾದರೂ ಹಿಂದಿನ ಬಿಡ್‌ದಾರರು ಜವಾಬ್ದಾರರು.

4 ಬೆಂಗಳೂರಿನಲ್ಲಿರುವ ಮೈಸೂರು ರಾಜ್ಯದ ಇನ್ಸ್‌ಪೆಕ್ಟರ್–ಜನರಲ್ ಆಫ್ ಪೋಲೀಸ್‌ರವರು, ಖಾಯಂ ಮಾಡುವವರೆಗೆ ಮಾರಾಟ ಪೂರ್ಣವಾಗುವುದಿಲ್ಲ. ಯಾವುದೇ ಕಾರಣಗಳನ್ನು ಕೊಡದೆ ಅದನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ಅವರಿಗೆ ಮೀಸಲಾಗಿದೆ.

5 ಯಾವುದೇ ವ್ಯಾಜ್ಯದ ಸಂದರ್ಭದಲ್ಲಿ ಬೆಂಗಳೂರಿನಲ್ಲಿರುವ ಮೈಸೂರು ರಾಜ್ಯದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್‌ರವರ ತೀರ್ಮಾನವೇ ಕೊನೆಯದು ಮತ್ತು ಕಾನೂನು ಬದ್ಧವಾದುದು.

6 ಬಿಡ್ ಹಣದ ಮೇಲೆ ನಿಬಂಧನೆಗಳ ಪ್ರಕಾರ ಮಾರಾಟ ತೆರಿಗೆಯನ್ನು ವಿಧಿಸಲಾಗುವುದು.

7 ಯಶಸ್ವಿ ಆಗದ ಬಿಡ್‌ದಾರರ ಠೇವಣಿ ಹಣವನ್ನು ಹರಾಜು ಮುಗಿದ ತಕ್ಷಣ ವಾಪಸು ಮಾಡಲಾಗುವುದು.

8 ಬೆಂಗಳೂರಿನಲ್ಲಿರುವ ಮೈಸೂರು ರಾಜ್ಯದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್‌ರವರಿಂದ ಹರಾಜು ಮಾರಾಟ ಖಾಯಂ ಆದ ಒಡನೆ ಪೂರ್ತಿ ಬಿಡ್ ಹಣ ಮತ್ತು ಮಾರಾಟ ತೆರಿಗೆಯನ್ನು ಪಾವತಿ ಮಾಡಿದ ನಂತರ ವಾಹನವನ್ನು ಸಾಗಿಸಲು ಯಶಸ್ವಿ ಆದ ಬಿಡ್‌ದಾರರು ತಮ್ಮ ಸ್ವಂತ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು. ಮಾರಾಟ ತೀರ್ಮಾನ ಆದ ನಂತರ ಸ್ವತ್ತನ್ನು ನೋಡಿಕೊಳ್ಳುವ ಬಗ್ಗೆ ಇಲಾಖೆ ಯಾವ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ.

9 ವಾಹನದ ರಿಜಿಸ್ಟ್ರೇಷನ್ನನ್ನು ಕೊಳ್ಳುವವರೇ ಮಾಡಿಸಿಕೊಳ್ಳಬೇಕು.

10 ಸರ್ಕಾರದ ಪದಾರ್ಥಗಳ ಹರಾಜು ಸಂಬಂಧಪಟ್ಟಂತೆ ಜಾರಿಯಲ್ಲಿರುವ ಸರ್ವ ನಿಬಂಧನೆಗಳಿಗೂ ಬಿಡ್‌ದಾರರು ಬದ್ಧರಾಗಿರತಕ್ಕದ್ದು.

11 ಬೇಕಾಗಿರುವ ಮತ್ತಿತ್ತರವುದೇ ವಿವರಗಳನ್ನು ಮೈಸೂರಿನಲ್ಲಿರುವ ಸೂಪರಿಂಟೆಂಡೆಂಟ್ ಆಫ್ ಪೋಲೀಸ್‌ರವರ ಕಚೇರಿಯಿಂದ ದೃಢಪಡಿಸಿಕೊಳ್ಳಬಹುದು

ಆರ್ ವಿಶ್ವನಾಥನ್, ಸೂಪರಿಂಟೆಂಡೆಂಟ್ ಆಫ್ ಪೋಲೀಸ್, ಮೈಸೂರು ಜಿಲ್ಲೆ

ಗೋಪಡೆ ಪೂರ್ಣ ನಿಶ್ಶೇಧವಾಗಲಿ

ಫ್ಯೂಜಿಪರ್ವತದ ತಪ್ಪಲಲ್ಲಿ ಮೃಗಶಾಲೆ

ಜಪಾನಿನಲ್ಲಿನ ಒಂದು ವ್ಯಾಪಾರ ಸಂಗಡವು 3776 ಮಿಟರುಗಳ ಎತ್ತರದ ಫ್ಯೂಜಿ ಪರ್ವತ ತಪ್ಪಲಲ್ಲಿ ಒಂದು ಮೃಗಶಾಲೆಯನ್ನು ನಿರ್ಮಿಸಲು ಯೋಜಿಸಿದೆ. ಆಫ್ರಿಕಾದಲ್ಲಿನ ಅನೇಕ ಪ್ರಾಣಿಗಳನ್ನು ಸಂಗ್ರಹಿಸಿ ಇಲ್ಲಿಗೆ ತರಲಾಗುವುದು. ಇದಕ್ಕೆ 7 ಲಕ್ಷ ಚದರು ಮಿಟರುಗಳ ವಿಸ್ತಾರದ ಸ್ಥಳ ಬೇಕಾಗುವುದು. 1300 ಆಫ್ರಿಕದ ವಿವಿಧ ಪ್ರಾಣಿಗಳನ್ನು ಇಲ್ಲಿ ಸಂಗ್ರಹಿಸುವರು. 200 ಸಿಂಹಗಳೂ, 10 ಆನೆಗಳೂ 8 ಜಿರಾಫೆಗಳೂ ಸೇರಿ 29 ಬಗೆಯ ಪ್ರಾಣಿಗಳಿರುತ್ತವೆ. ಈ ಮೃಗಾಲಯವನ್ನು ಮುಂದಿನ ಏಪ್ರಿಲ್ ತಿಂಗಳಲ್ಲಿ ತೆರೆಯುವ ನಿರೀಕ್ಷೆ ಇದ್ದು, ಪ್ರೇಕ್ಷಕರು ಕಾರುಗಳಲ್ಲಿ ಸಂಚರಿಸಬಹುದು.

●

ಪ ಸ ರಾ

ದಸರಾದಲ್ಲಿ ಮೆರವಣಿಗೆ ದರ್ಬಾರು ಇಲ್ಲವಿದ್ದರೂ, ರಾಜ್ಯದಲ್ಲಿ ಅನೇಕಕಡೆ ಅಭಾವ ಪರಿಸ್ಥಿತಿಗಾಗಿ ಮಿತವ್ಯಯ ಅನುಸರಿಸಲಾಗುತ್ತಿದ್ದರೂ, ಫನ ಸರಕಾರವು ದಸರಾ ಆಕರ್ಷಣೀಯವಾಗಿರುವಂತೆ, ವಸ್ತುಪ್ರದರ್ಶನ ಮತ್ತು ಕೈಗಾರಿಕಾ ಮೇಳ, ಚಲನ ಚಿತ್ರೋತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು, ಕಾರಂಜಿಯಲ್ಲಿ ತೇಪ್ಲೋತ್ಸವ ಮುಂತಾದವುಗಳನ್ನು ಮೈಸೂರು ನಗರದಲ್ಲಿ ಏರ್ಪಡಿಸಿದುದು ಸ್ತುತ್ಯಾರ್ಹವು – ರಾಜ್ಯದ ಅನೇಕ ಕಡೆ ನಾಡಹಬ್ಬವಾಗಿ ಆಚರಿಸಲಾಯಿತು.

●

ಭಾಷಾ ಸಮ್ಮೇಳನ

ತಿರುಪತಿ— ದ್ರಾವಿಡ ಭಾಷೆಗಳ 30 ಮಂದಿ ವಿದ್ವಾಂಸರು ತಿರುಪತಿ ವೆಂಕಟೇಶ್ವರ ಸ್ವಾಮಿ ವಿಶ್ವವಿದ್ಯಾನಿಲಯದಲ್ಲಿ ತಾ ॥ 27–28 ರಂದು ಸಮ್ಮೇಳನತಾಂಗಿ, ವಿವಿಧ ವಿಷಯಗಳನ್ನು ಪರಿಶೀಲಿಸುವರು.

○

ಬಕ್ಕ ತಲೆಗಳ ರಾಜ

ಫ್ರಾನ್ಸಿನ ಸೆಂಟ್ ಸಾವಿನಲ್ಲಿ ನಡೆದ ಬಕ್ಕತಲೆಗಳ ಪ್ರಮುಖ ಸಮಾವೇಶದಲ್ಲಿ ಬೆಲ್ಜಿಯಂ, ಸ್ವಿಟ್ಜರ್‌ಲೆಂಡ್, ಇಟಲಿ, ಮೊದಲಾದ ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದರು : ಬಿರುಸಿನ ಚರ್ಚೆಯ ನಂತರ ಪ್ರತಿನಿಧಿಗಳು ಫ್ರಾನ್ಸಿನ ಕ್ಲೌಬರ್ಟ್ ಗಾಲ್ಲೊಟ್‌ರನ್ನು ' ಬಕ್ಕತಲೆಗಳ ರಾಜ' ಎಂದು ಆಯ್ಕೆಮಾಡಿದರು. ಅವನ ಬಕ್ಕ ತಲೆ 384 ಚದರ ಸೆಂಟಿಮೀಟರುಗಳು. ಅದೇ ಸಮಾವೇಶದಲ್ಲಿ ಅವನಿಗೆ "ಫ್ರಾನ್ಸಿನ ಅತ್ಯಂತ ಭವ್ಯವಾದ ಬಕ್ಕತಲೆ" ಎಂಬ ರಾಷ್ಟ್ರೀಯ ಪ್ರಶಸ್ತಿಯನ್ನೂ ನೀಡಲಾಯಿತು

★

ತಿಪಟೂರು ತಾಲ್ಲೂಕು ಕಾಂಗ್ರೆಸ್ ಸಮಿತಿ ಮಂತ್ರಿ ಶ್ರೀ ಬಸವಲಿಂಗಪ್ಪನವರನ್ನು ಸನ್ಮಾನಿಸಿತು.